# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 03.09.2025ರಂದು ಪೂರ್ವಾಹ್ನ ಗಂಟೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2025ನೇ ಸಾಲಿನ ಆರನೇ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು :**

| | | |
|---|---|---|
| 1. | ಪ್ರೊ. ಪಿ.ಎಲ್. ಧರ್ಮ<br>ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಪರಿಣಿತ<br>ಡೀನರು, ಕಲಾ ನಿಕಾಯ | ಸದಸ್ಯರು |
| 3. | ಡಾ. ಎಸ್.ಬಿ.ಎಂ. ಪ್ರಸನ್ನ | ಸದಸ್ಯರು |
| 4. | ಡಾ. ಕೆ.ಸಿ. ಮಹದೇಶ | ಸದಸ್ಯರು |
| 5. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು |
| 6. | ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿ | ಸದಸ್ಯರು |
| 7. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು |
| 8. . | ಶ್ರೀ ರಘುರಾಜ್ | ಸದಸ್ಯರು |
| 9. | ಶ್ರೀ ಅಚ್ಚುತ ಗಟ್ಟಿ | ಸದಸ್ಯರು |
| 10. | ಶ್ರೀಮತಿ ಪುಷ್ಪಲತಾ ಹೆಚ್.ಕೆ.<br>ಪ್ರಾಂಶುಪಾಲರು ಮತ್ತು ಸಹ ನಿರ್ದೇಶಕರು, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ,<br>(**ಶಾಲಾ ಶಿಕ್ಷಣ ಮತ್ತು ಸಾಕ್ಷರತೆ** ಆಯುಕ್ತರ ಪರವಾಗಿ) | ಸದಸ್ಯರು |
| 11. | ಪ್ರೊ. ಹೆಚ್. ದೇವೇಂದ್ರಪ್ಪ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 12. | ಶ್ರೀ ಪಂಚಲಿಂಗಸ್ವಾಮಿ, ಕೆ.ಎಸ್.ಎ.ಎಸ್.,<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು |
| 13. | ಶ್ರೀ ಕೆ. ರಾಜು ಮೊಗವೀರ, **ಕೆ.ಎ.ಎಸ್.**<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ |

**ಅನುಪಸ್ಥಿತರು:**

| | | |
|---|---|---|
| 1. | ಡಾ. ಕವಿತಾ ಕೆ.ಆರ್.<br>ಜಂಟಿ ನಿರ್ದೇಶಕರು (ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 2. | ತಾಂತ್ರಿಕ ಶಿಕ್ಷಣ ನಿರ್ದೇಶಕರು,<br>ಕರ್ನಾಟಕ ಸರ್ಕಾರ<br>ಬೆಂಗಳೂರು | ಸದಸ್ಯರು |
| 3. | ಶ್ರೀ ಮಹಮ್ಮದ್ ಸವಾದ್ | ಸದಸ್ಯರು |
| 4. | ಡಾ. ಸಂದೇಶ್ ಕೆ.ಎಸ್.<br>(ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪರವಾಗಿ) | ಸದಸ್ಯರು |

# <u>ಪ್ರಾರಂಭಿಕ</u>

**ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಯವರನ್ನು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.**

**ಮಾನ್ಯ ಕುಲಪತಿಯವರು ಮತ್ತೊಮ್ಮೆ ಎಲ್ಲರನ್ನು ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಿದರು.**

- **ಸ್ವಾಗತ:**

ಶ್ರೀ ಪಂಚಲಿಂಗಸ್ವಾಮಿ ಎಸ್ ., ಜಂಟಿ ನಿರ್ದೇಶಕರು , ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ , ಮಂಗಳೂರು ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರದಲ್ಲಿರಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ : ಆಇ/303/ರಾಲೆಪ/2025, ದಿನಾಂಕ 11.08.2025 ರಲ್ಲಿ ನೇಮಕ ಮಾಡಲಾಗಿರುತ್ತದೆ . ಸದರಿಯವರು ಪ್ರಭಾರ ಹಣಕಾಸು ಅಧಿಕಾರಿಯಾಗಿ ದಿನಾಂಕ 12.08.2025 ರಂದು ಅಧಿಕಾರ ವಹಿಸಿಕೊಂಡಿರುತ್ತಾರೆ.

ಸಿಂಡಿಕೇಟು ಸಭೆಗೆ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ ಹಣಕಾಸು ಅಧಿಕಾರಿ ಶ್ರೀ ಪಂಚಲಿಂಗಸ್ವಾಮಿ ಎಸ್., ಇವರನ್ನು ಸಿಂಡಿಕೇಟ್ ಸಭೆಗೆ ಸ್ವಾಗತಿಸಲಾಯಿತು.

- **ಕೃತಜ್ಞತೆ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ ಪ್ರಕರಣ 20ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರದಲ್ಲಿದ್ದ ಪ್ರೊ. ಸಂಗಪ್ಪ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ ಇವರನ್ನು ಪ್ರಭಾರ ಹಣಕಾಸು ಅಧಿಕಾರಿ ಹುದ್ದೆಯಿಂದ ಮುಕ್ತಗೊಳಿಸಲಾಗಿದೆ.

ಪ್ರೊ. ಸಂಗಪ್ಪರವರು ಸಿಂಡಿಕೇಟು ಸಭೆಗಳಿಗೆ ವಿಶೇಷ ಆಹ್ವಾನಿತರಾಗಿ ಭಾಗವಹಿಸಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದನ್ನು ಸ್ಮರಿಸುತ್ತಾ ವಿಶ್ವವಿದ್ಯಾನಿಲಯದ ಸಿಂಡಿಕೇಟು ಪರವಾಗಿ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸಲಾಯಿತು.

## I. ಅನುಸರಣಾ ವರದಿಯ ಅನುಮೋದನೆ

**ದಿನಾಂಕ 31.07.2025ರಂದು ನಡೆದ ಸಿಂಡಿಕೇಟಿನ 2025ನೇ ಸಾಲಿನ ಐದನೇ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ**

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:7(2025) ಕ್ಕೆ** ಸಂಬಂಧಿಸಿದಂತೆ ಮಾನ್ಯ ಸಿಂಡಿಕೇಟು ಸದಸ್ಯರುಗಳಾದ ಡಾ.ಎಸ್.ಬಿ.ಎಂ. ಪ್ರಸನ್ನ, ಡಾ.ಕೆ.ಸಿ.ಮಹದೇಶ, ಶ್ರೀ ಸುರೇಶ್ ಬಿ.ನಾವೂರು, ಶ್ರೀಮತಿ ಜೂಡಿತ್ ಮೆಂಡೋನ್ಸ, ಶ್ರೀ ರಘುರಾಜ್, ಶ್ರೀ ಅಚ್ಚುತ ಗಟ್ಟಿ ಇವರುಗಳು ಈ ಹಿಂದೆ ರಚಿಸಲಾದ ತಾತ್ಕಾಲಿಕ ಸಿಬ್ಬಂದಿಗಳ ಹೆಚ್ಚುವರಿ ನೇಮಕಾತಿಯ ಕುರಿತು ಸಿಂಡಿಕೇಟು ತನಿಖಾ ಸಮಿತಿಯ ಕಾರ್ಯವನ್ನು ಏಕಾಏಕಿ ಕೈಗೆತ್ತಿಕೊಳ್ಳಬಾರದಾಗಿ ಆದೇಶಿಸಿರುವುದನ್ನು ಪ್ರಶ್ನಿಸಿ ಸಿಂಡಿಕೇಟು ಸಭೆಯ ನಿರ್ಣಯದ ಉಲ್ಲಂಘನೆಯಾಗಿದೆಯೆಂದು ಆಕ್ಷೇಪಿಸಿದರು.

ಆದರೆ ದಿನಾಂಕ 23.07.2025ರಂದು ನಡೆದ ಕರ್ನಾಟಕ ವಿಧಾನ ಪರಿಷತ್ತಿನ "ಸರ್ಕಾರಿ ಭರವಸೆಗಳ ಸಮಿತಿ" ಸಭೆಯಲ್ಲಿ ಈಗಾಗಲೇ ಈ ವಿಷಯಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಲು ಸದರಿ ಸಮಿತಿಯು ಖುದ್ದಾಗಿ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ತನಿಖೆ ಕೈಗೊಳ್ಳಲಿರುವುದರಿಂದ ಬೇರೆ ಯಾವುದೇ ಸಮಿತಿಯ ತನಿಖೆಯನ್ನು ತಾತ್ಕಾಲಿಕವಾಗಿ ಮುಂದೂಡುವಂತೆ ಮಾನ್ಯ ಕುಲಪತಿಯವರು ಕಡತದಲ್ಲಿ ದಾಖಲಿಸಿರುವುದಾಗಿ ಸಿಂಡಿಕೇಟು ಸಭೆಗೆ ತಿಳಿಸಲಾಯಿತು.

**- ಉಳಿದಂತೆ ಅನುಮೋದಿಸಲಾಯಿತು –**

## II. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.6:1(2025) |
| ವಿಷಯ: | ಡಾ.ಕಿಶೋರಿ ಪಿ. ನಾರಾಯಣ್‌ಕರ್, ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ ಇವರಿಗೆ ಸಹಾಯಕ ಪ್ರಾಧ್ಯಾಪಕ ಹಂತ 2ಗೆ ನೀಡಿರುವ ಪದೋನ್ನತಿ ದಿನಾಂಕವನ್ನು ಪರಿಷ್ಕರಿಸುವುದಕ್ಕೆ ಸಂಬಂಧಿಸಿ - ಸ್ಕ್ರೀನಿಂಗ್ ಕಂ ಇವ್ಯಾಲ್ಯೂವೇಶನ್ ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು |

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.6:2(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಯೋಜನೆ , ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಗೆ ಪ್ರಭಾರ ನಿರ್ದೇಶಕರನ್ನು ಹಾಗೂ ಪ್ರಧಾನಮಂತ್ರಿ ಉಚ್ಛತರ್ ಶಿಕ್ಷಾ ಅಭಿಯಾನ್ (PM - USHA) ನ Institutional Co-ordinator ನ್ನು ನೇಮಕ ಮಾಡಿದ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:3(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕ್ರಿಶ್ಚಿಯಾನಿಟಿ ಪೀಠಕ್ಕೆ ಮುಖ್ಯಸ್ಥ ರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:4(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕೊಂಕಣಿ ಅಧ್ಯಯನ ಪೀಠಕ್ಕೆ ಸಂಯೋಜಕರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.6:5(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕನ್ನಡ ಮತ್ತು ಅನ್ವಯಿಕ ಸಸ್ಯಶಾಸ್ತ್ರ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಕಾತಿ ಮಾಡಿದ ಕುರಿತು ಘಟನೋತ್ತರ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.6:6(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯ ಯನ ವಿಭಾಗಗಳ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.6:7(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗಳಿಗೆ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಅಂತರಾಷ್ಟ್ರೀಯ ಸಮ್ಮೇಳನ ಮುಗಿಸಿ ವಿದೇಶದಿಂದ ಹಿಂದಿರುಗಿದ ನಂತರ ಅಲ್ಲಿ ಪಡೆದುಕೊಂಡ ಶೈಕ್ಷಣಿಕ ಅನುಭವವನ್ನು ಇತರ ಬೋಧಕ ಸಿಬ್ಬಂದಿಗಳೊಂದಿಗೆ ಹಂಚಿಕೊಳ್ಳಲು ವಿಶ್ವವಿದ್ಯಾನಿಲಯ ವು ಸೂಕ್ತ ವ್ಯವಸ್ಥೆ ಮಾಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.6:8(2025)

ವಿಷಯ: ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ ವಿ ದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:9(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Bearys Institute of Technology , Mangalore ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:10(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Malabar Cancer Centre (Post Graduate Institute of Oncology Sciences and Research ), Govt of Kerala ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಸದರಿ ಸಂಸ್ಥೆಯಲ್ಲಿ ವಿಶ್ವವಿದ್ಯಾನಿಲಯದ ಉದ್ಯೋಗಿಗಳಿಗೂ ರಿಯಾಯಿತಿ ದರದಲ್ಲಿ ಚಿಕಿತ್ಸೆ ದೊರೆಯುವಂತಾಗುವ ನಿಟ್ಟಿನಲ್ಲಿ ಒಡಂಬಡಿಕೆಯಲ್ಲಿ ಆ ಅಂಶವನ್ನು ಅಳವಡಿಸುವ ಬಗ್ಗೆ ಸೂಕ್ತ ಮಾರ್ಪಾಡು ಮಾಡುವಲ್ಲಿ ಕ್ರಮ ವಹಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.6:11(2025)

ವಿಷಯ: ಡಾ.ವಿಪಿಎಸ್ ನಾಯ್ಡು, Chief Scientist & Professor (AcSIR), CSIR-National Aerospace Laboratories, Bangalore ಇವರಿಗೆ ಡಿ.ಎಸ್ಸಿ. (Doctor of Sciences) ಪದವಿ ಪ್ರದಾನ ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಸದರಿಯವರ ಬಯೋಡಾಟವನ್ನು ಇ.ಮೈಲ್ ಮೂಲಕ ಎಲ್ಲಾ ಸಿಂಡಿಕೇಟು ಸದಸ್ಯರುಗಳಿಗೆ ಕಳುಹಿಸಿಕೊಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:12(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ , ಗಣಕಯಂತ್ರ ಕೇಂದ್ರದ Networking Devices, Wifi Devices ಮತ್ತು Firewall ನ ವಾರ್ಷಿಕ ನಿರ್ವಹಣೆಯ ಟೆಂಡರ್ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:13(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ಕೇಂದ್ರಕ್ಕೆ ಕಲ್ಪಿಸಲಾದ 500 Mbps Internet Leased Line ಸಂಪರ್ಕದ ಹೆಚ್ಚುವರಿ ಸೇವಾ ಅವಧಿಗೆ ಬಳಸಿಕೊಂಡಿರುವುದಕ್ಕೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:14(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ , ವಿವಿಧ ವಿಭಾಗ /ಕೋರ್ಸು ಮತ್ತು ಕಚೇರಿಗಳಿಗೆ ಇಂಟರ್ ನೆಟ್ ಸಂಪರ್ಕ ಕಲ್ಪಿಸಲು ಬೇಕಾಗಿರುವ UTP/OFC Networking ಐಟಂಗಳನ್ನು ಧಾರಣಾ ಗುತ್ತಿಗೆ ದರದಲ್ಲಿ ಖರೀದಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.6:15(2025)

ವಿಷಯ: ಯುಜಿಸಿ ನಿಯಮಾವಳಿ 2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಮಂಗಳೂರು ವಿಶ್ವ ವಿದ್ಯಾನಿಲಯದ ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ - ಸ್ಕ್ರೀನಿಂಗ್ ಕಂ ಇವ್ಯಾಲ್ಯೂವೇಶನ್ / ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.6:16(2025)

ವಿಷಯ: ಯುಜಿಸಿ ನಿಯಮಾವಳಿ 2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ/ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ - ಸ್ಕ್ರೀನಿಂಗ್ ಕಂ ಇವ್ಯಾಲ್ಯೂವೇಶನ್ / ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಹಣಕಾಸು:ಸಾ.ಸ.6:17(2025)

ವಿಷಯ: 2024-25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಅನುಮೋದನೆಯ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.6:18(2025)

ವಿಷಯ: Annual Maintenance One year of Centralized AC System of Mangala Auditorium Building at Mangalore University Mangalagangothri – ಟೆಂಡರು ಅಂಗೀಕರಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.6:19(2025)

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ವಾಣಿಜ್ಯ ಕಟ್ಟಡದ ತರಗತಿ ಕೊಠಡಿ ಸಂಖ್ಯೆ 116ನ್ನು ಕಂಪ್ಯೂಟರ್ ಲ್ಯಾಬ್ ಆಗಿ ಪರಿವರ್ತಿಸುವುದು ಮತ್ತು ಇದಕ್ಕೆ ಪೂರಕವಾದ ವಿದ್ಯುದ್ಧೀಕರಣದ ಕಾಮಗಾರಿ – Under RUSA Component – 9 of 2.0 – ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.6:20(2025)

ವಿಷಯ: Providing 40 KLD Capacity STP (Sewage Treatment Plant) for boys hostels at Mangalore University Campus, Mangalagangothri – ಕಾಲಾವಧಿ ವಿಸ್ತರಣೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.6:21(2025)

ವಿಷಯ: Provoiding 40 KLD Capacity STP (Sewage Treatment Plant) for boys Hostel at Mangalore University Campus Mangalagangothri - ಹೆಚ್ಚುವರಿ ಪರಿಮಾಣ ಮೊತ್ತ (Excess Qty. Work Slip) ಹಾಗೂ ಹೆಚ್ಚುವರಿ ಐಟಂ (EIRL) ಮತ್ತು ಉಳಿಕೆ ಮೊತ್ತಗಳಿಗೆ ಹಾಗೂ ಪರಿಷ್ಕೃತ ಅಂದಾಜುಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.6:22(2025)

ವಿಷಯ: ಪ್ಯಾಕೇಜ್ ಟೆಂಡರ್ ಕಾಮಗಾರಿ

(1/4 1) - ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಪ್ರಾಧ್ಯಾಪಕರ ವಸತಿಗೃಹ ಕಟ್ಟಡ ಸಂಖ್ಯೆ ಬಿ -4 ರ ಲೀಚ್ ಪಿಟ್‌ನ ವ್ಯವಸ್ಥೆ ಹಾಗೂ ಒಳಾಂಗೀಣ ನೀರು ಸರಬರಾಜು ಕೊಳವೆಯನ್ನು ಮರು ವ್ಯವಸ್ಥೆ ಮಾಡುವುದು.

(2/41) - ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ 'ಇ' ಮಾದರಿ ವಸತಿಗೃಹ ಸಂಖ್ಯೆ 1 ರ ಕುಸಿದಿರುವ ಲೀಚ್ ಪಿಟ್‌ನ ಮರು ವ್ಯವಸ್ಥೆ - ಕಾಮಗಾರಿಗಳ ಕಾಲಾವಧಿ ವಿಸ್ತರಣೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.6:23(2025)

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು , ಮಂಗಳೂರು ಇಲ್ಲಿನ ಆಡಳಿದ ಕಚೇರಿಯಲ್ಲಿ Cubical Partition ನಿರ್ಮಿಸುವುದು ಮತ್ತು Wooden Table ಮತ್ತು ಕುರ್ಚಿ ಹಾಗೂ ಸ್ಟೋರೇಜ್ ಬಾಕ್ಸ್ ಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿ ಮತ್ತು ಇದಕ್ಕೆ ಪೂರಕವಾದ ವಿದ್ಯುಧ್ದೀಕರಣ ಕಾಮಗಾರಿ - Under RUSA Component - 9 of 2.0 - ಟೆಂಡರು ಅಂಗೀಕರಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.6:24(2025)

ವಿಷಯ: ಶ್ರೀ ರಘುರಾಜ್ ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ 1 : ವಿವಿಧ ಸಮಿತಿಗಳನ್ನು ಪುನರ್ ರಚಿಸಲು ನಿರ್ಣಯ ಕೈಗೊಳ್ಳುವುದು.

**ನಿರ್ಣಯ:** ನಿರ್ಣಯಿಸಲಾಯಿತು.

ವಿಷಯ 2 : ವಿವಿಧ ಪೀಠಗಳ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿ ಯಲ್ಲಿ ವಿಶ್ವವಿದ್ಯಾನಿಲಯದ ನಿಯಮದ ಮಾಹಿತಿ ಹಾಗೂ ಪೀಠಗಳ ಪುನರ್ ರಚನೆಯ ಬಗ್ಗೆ ಮಾಹಿತಿ ಹಾಗೂ ಚರ್ಚಿಸಿ ನಿರ್ಣಯ ಕೈಗೊಳ್ಳುವುದು.

**ನಿರ್ಣಯ:** ಚರ್ಚಿಸಲಾಯಿತು.

ವಿಷಯ 3 : ಜೂನ್ ತಿಂಗಳ ವಿದ್ಯುತ್ ಬಿಲ್ ನ್ನು ಸಿಂಡಿಕೇಟ್ ಗೆ ಸಲ್ಲಿಸುವುದು ಮತ್ತು ವಿದ್ಯುತ್ ಬಿಲ್ ಕಡಿತಗೊಳಿಸಲು ಈ ಹಿಂದೆ ಸಿಂಡಿಕೇಟ್ ನಲ್ಲಿ ನಿ ರ್ಣಯಿಸಿದಂತೆ ಆಡಳಿತ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಹಾಗೂ ಚರ್ಚಿಸಿ ನಿರ್ಣಯ ಕೈಗೊಳ್ಳುವುದು.

**ನಿರ್ಣಯ:** ಚರ್ಚಿಸಲಾಯಿತು.

ವಿಷಯ 4 : RUSA ಅನುದಾನದಲ್ಲಿ ಪುರುಷರ ಹಾಗೂ ಮಹಿಳೆಯ ಹಾಸ್ಟೆಲ್ ಕಾಮಗಾರಿಗಾಗಿ ಮೀಸಲಿಟ್ಟ ಅನುದಾನವನ್ನು ಇಂಟರ್ ನ್ಯಾಷನಲ್ ಹಾಸ್ಟೆಲ್ ಗೆ ವರ್ಗಾಯಿಸಿದ ವಿಚಾರದ ಬಗ್ಗೆ ಇರುವ ಮಾಹಿತಿಯ ಬ ಗ್ಗೆ ಸರ್ಕಾರದ ನಿರ್ದೇಶನ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು ಮತ್ತು ನಿರ್ಣಯ ಕೈಗೊಳ್ಳುವುದು.

**ನಿರ್ಣಯ:** ಹಣಕಾಸು ಅಧಿಕಾರಿಯವರು ಈ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಮಾನ್ಯ ಸಿಂಡಿಕೇಟು ಸದಸ್ಯರಿಗೆ ನೀಡಿ, ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.6:25(2025)

ವಿಷಯ: ಡಾ.ಕೆ.ಸಿ. ಮಹದೇಶ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ-1 : ಪ್ರಸ್ತುತ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರು ಮತ್ತು ಅಧ್ಯಾಪಕೇತರ ಸಿಬ್ಬಂದಿಗಳ ಸಂಖ್ಯೆ ಮತ್ತು ಸರ್ಕಾರದ ಅನುದಾನದಿಂದ ಅವರಿಗೆ ನೀಡುತ್ತಿ ರುವ ಸಂಬಳದ ವಿವರಗಳು ಮತ್ತು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಸಂಬಳ ನೀಡುತ್ತಿರುವ ಸಿಬ್ಬಂದಿಗಳ, ಅಧ್ಯಾಪಕ/ ಅಧ್ಯಾಪಕೇತರರ ವಿವರಗಳನ್ನು ತಿಳಿಸುವುದು ಮತ್ತು ಚರ್ಚಿಸಿ ನಿರ್ಣಯಿಸುವುದು.

**ನಿರ್ಣಯ:** ಹಣಕಾಸು ಅಧಿಕಾರಿಯವರು ಆಂತರಿಕ ಸಂಪನ್ಮೂಲದಿಂದ ನಿವೃತ್ತರಿಗೆ ನೀಡುತ್ತಿರುವ ಪಿಂಚಣಿ ವಿವರ ಹಾಗೂ ಉದ್ಯೋಗಿಗಳ ಪಿಂಚಣಿ ವಂತಿಗೆ ವಿವರದೊಂದಿಗೆ ಮುಂದಿನ ಸಭೆಯಲ್ಲಿ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ವಿಷಯ-3 : ವಿಶ್ವವಿದ್ಯಾನಿಲಯದ ಜೊತೆ ಪ್ರಸ್ತುತ ಇದುವರೆಗೆ ಒಡಂಬಡಿಕೆ ಮಾಡಿಕೊಂಡು ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳ ಸಂಖ್ಯೆಗಳ ಮಾಹಿತಿ ನೀಡುವುದು ಮತ್ತು ಕಾರ್ಯ ನಿರ್ವಹಿಸದೆ ಇರುವ ಸಂಸ್ಥೆಗಳ ಮಾಹಿ ತಿ ಮತ್ತು ಅವುಗಳ ಮೂಲಕ ವಿಶ್ವವಿದ್ಯಾ ನಿಲಯಕ್ಕೆ ಆಗುತ್ತಿರುವ ಅನುಕೂಲ ಮತ್ತು ಪೂರಕ ಮಾಹಿತಿಯನ್ನು ನೀಡಿ ಚರ್ಚಿಸಿ ನಿರ್ಣಯಿಸುವುದು.

**ನಿರ್ಣಯ:** ಚರ್ಚಿಸಲಾಯಿತು. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ NAAC Accreditation ನಂತರದಲ್ಲಿ ಈಗಾಗಲೇ ಒಡಂಬಡಿಕೆ ಮಾಡಿಕೊಂಡಿರುವ ಸಂಶೋಧನಾ ಕೇಂದ್ರಗಳಲ್ಲಿ ಕಳೆದ ಐದು ವರ್ಷಗಳಲ್ಲಿ ಕೈಗೊಂಡ ಸಂಶೋಧನೆಗಳು, ಸಾಧನೆಗಳು ಹಾಗೂ ಬೆಳವಣಿಗೆಗಳ ಪೂರ್ಣ ವಿವರಗಳನ್ನು ಪಡೆದು ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ವಿಷಯ-4 : ಮಂಗಳೂರು ವಿಶ್ವವಿದ್ಯಾನಿಲಯದ B.Ed./ M.Ed. ಕಾಲೇಜುಗಳ ಸಂಖ್ಯೆಗಳು ಮತ್ತು ಅವುಗಳ ಕಾರ್ಯನಿರ್ವಹಣೆ ಮತ್ತು ವಿಶ್ವವಿದ್ಯಾನಿಲಯದ ಅಡಿಯಲ್ಲಿ ಎಷ್ಟು ಸಂಸ್ಥೆಗಳಿಗೆ ಸಂಶೋಧನಾ ಕೇಂದ್ರಗಳನ್ನು ಮತ್ತು Ph.D. ನೀಡಲಾಗಿದೆ ಮತ್ತು ಅವುಗಳ ಕಾರ್ಯನಿರ್ವಹಣೆ , ವಾರ್ಷಿಕ ನವೀಕರಣದ ಸಂಪೂರ್ಣ ಮಾಹಿತಿಗಳನ್ನು ನೀಡುವುದು ಮತ್ತು ಚರ್ಚಿಸಿ ನಿರ್ಣಯಿಸುವುದು.

**ನಿರ್ಣಯ:** ಚರ್ಚಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.6:26(2025)

ವಿಷಯ: ಶ್ರೀ ರಘುರಾಜ್ ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

"ಶ್ರೀ ಉಮೇಶ್ಚಂದ್ರ, ಉಪನ್ಯಾಸಕರು, ಪತ್ರಿಕೋದ್ಯಮ ವಿಭಾಗ ಇವರಿಗೆ ಪದೋನ್ನತಿ ನೀಡದಿರುವ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸುವುದು ಮತ್ತು ಇವರು ಈ ಹಿಂದೆ ನೀಡಲಾಗಿರುವ ಅರ್ಜಿ, ದಾಖಲೆಗಳು, ಅಡಕಗಳು, ಪುಸ್ತಕಗಳು ಕಾಣೆಯಾಗಿರುವ ಬಗ್ಗೆ ಅರ್ಜಿದಾರರಿಂದ ದೂರು ಬಂದಿದ್ದರೂ, ಆಡಳಿತ ವಿಭಾಗ ಕೈಗೊಂಡ ಕ್ರಮ ಮತ್ತು ಈವರೆಗೂ ಅವರಿಗೆ ಪದೋನ್ನತಿಗೆ ಅನರ್ಹಗೊಳಿಸಲು ಕಾರಣ ನೀಡುವುದು ಮತ್ತು ಅವರಿಗೆ ಪದೋನ್ನತಿ ನೀಡುವ ಬಗ್ಗೆ ಚರ್ಚಿಸಿ ಅಗತ್ಯ ಕ್ರಮಕೈಗೊಳ್ಳುವುದು".

**ನಿರ್ಣಯ:** ಶ್ರೀ ಉಮೇಶ್ಚಂದ್ರ ಅವರಿಗೆ ಪ್ರಸ್ತುತ ಅವರಲ್ಲಿ ಇರುವ ಎಲ್ಲಾ ದಾಖಲೆಗಳನ್ನು ವಿಶ್ವವಿದ್ಯಾನಿಲಯಕ್ಕೆ ನೀಡುವಂತೆ ಸೂಚಿಸಿ, ದಾಖಲೆಗಳನ್ನು ಪರಿಶೀಲಿಸಿ ಪದೋನ್ನತಿಗೆ ಬೇಕಾದ ಕೆಲಸಗಳನ್ನು ಕೈಗೆತ್ತಿಕೊಳ್ಳಲು ತುರ್ತಾಗಿ ಅವಕಾಶ ಮಾಡಿಕೊಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.6:27(2025)

ವಿಷಯ: ಶ್ರೀ ಸುರೇಶ್ ಕುಮಾರ್ ಬಿ. ನಾವೂರು, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ 1 : ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಶಾಖೆಯಲ್ಲಿನ ಅತ್ಯಂತ ಸುಂದರವಾಗಿ ಮತ್ತು ಕಲಾತ್ಮಕವಾಗಿ ಕಂಗೊಳಿಸುತ್ತಿದ್ದ ಪ್ರವೇಶ ದ್ವಾರದ ಗಾಜಿನ ಬಾಗಿಲಿನ ವಿನ್ಯಾಸವನ್ನು ತೆಗೆದು ಹಾಕಿ ಕಬ್ಬಿಣದ ಸಲಾಕೆಗಳ ಗೇಟ್ ಗಳನ್ನು ಅಳವಡಿಸಿ ಪ್ರವೇಶ ದ್ವಾರವನ್ನು ಬದಲಾವಣೆ ಮಾಡಿರುವುದಕ್ಕೆ ಕಾರಣ ಮತ್ತು ಚರ್ಚೆ.

**ನಿರ್ಣಯ:** ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳ ಹಾರ್ಡ್ ಕಾಪಿ ವಿತರಿಸುವಂತೆ ಹಾಗೂ ಶುಲ್ಕ ಕಡಿತಗೊಳಿಸುವಂತೆ ಕೋರಿ ವಿದ್ಯಾರ್ಥಿಗಳು ಪ್ರತಿಭಟಿಸಿರುವ ಸಂದರ್ಭದಲ್ಲಿ ತಳ್ಳಾಟ ಉಂಟಾಗಿ ಪ್ರವೇಶ ದ್ವಾರದ ಗಾಜು ಹಾನಿಯಾಗಿರುತ್ತದೆ ಎಂಬುದನ್ನು ಸಭೆಯ ಗಮನಕ್ಕೆ ತರಲಾಯಿತು.

ವಿಷಯ 2 : ವಿಶ್ವವಿದ್ಯಾನಿಲಯಕ್ಕೆ 2024 ಜನವರಿಯಿಂದ 2025 ಜುಲೈವರೆಗೆ ವಿವಿಧ ಯೋಜನೆಯಡಿಯಲ್ಲಿ ಬಂದಿರುವ ಒಟ್ಟು ಅನುದಾನಗಳು ಮತ್ತು ಕೈಗೊಂಡಿರುವ ಕಾಮಗಾರಿಗಳ ವಿವರಣೆ.

**ನಿರ್ಣಯ:** ಮಾಹಿತಿ ನೀಡಲಾಯಿತು.

ವಿಷಯ 3 : ವಿಶ್ವವಿದ್ಯಾನಿಲಯದಲ್ಲಿ ಪ್ರಗತಿಯಲ್ಲಿರುವ ಯಾವುದೇ ಕಾಮಗಾರಿಗಳು ಸಿಂಡಿಕೇಟ್ ಸದಸ್ಯರಿಂದ ವೀಕ್ಷಣೆಗೆ ಒಳಪಡುವಂತೆ ಮಾ ಡಲು ಈ ಬಗ್ಗೆ ಸಮಿತಿ ರಚನೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.

**ನಿರ್ಣಯ:** ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.6:28(2025) |
| ವಿಷಯ: | ಶ್ರೀ ರಘುರಾಜ್ ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ. |
| ವಿಷಯ 1 : | ತುಳು ಭಾಷೆಯಲ್ಲಿ ಪಿಹೆಚ್.ಡಿ. ಮಾಡಲು ಆಸಕ್ತರಿರುವ ತುಳುವರಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಸಿಂಡಿಕೇ ಟು ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವುದು ಮತ್ತು ತೃತೀಯ ಲಿಂಗಿಗಳಿಗೆ ಪಿಹೆಚ್.ಡಿ. ಮಾಡಲು ಅವಕಾಶ ಒದಗಿಸಿ ಕೊಡಲು ಚರ್ಚಿಸಿ ನಿರ್ಣಯ ಕೈಗೊಳ್ಳುವುದು . ಪಿಹೆಚ್.ಡಿ. ಪದವಿ ಪಡೆಯಲು ವಿಶ್ವವಿದ್ಯಾನಿಲಯ ದ ವ್ಯಾಪ್ತಿಗೆ ಬರುವ ಕೆಲವು ಕಾಲೇಜುಗಳ ಅರ್ಹ ಉಪನ್ಯಾಸಕರಿಗೆ ಪಿ ಹೆಚ್.ಡಿ. ಮಾರ್ಗದರ್ಶಕರಾಗಿ ನೇಮಕ ಮಾಡಲು ಕ್ರಮಕೈಗೊಳ್ಳಲು ನಿರ್ಣಯಿಸುವುದು. |
| **ನಿರ್ಣಯ:** | ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. |
| ವಿಷಯ 2 : | ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅಲ್ಪಸಂಖ್ಯಾತರ ಘಟಕ ಅಥವಾ ವಿಭಾಗವನ್ನು ಸ್ಥಾಪಿಸಿ , ಅಲ್ಪಸಂಖ್ಯಾತರ ಶೈಕ್ಷಣಿಕ ಪ್ರಗತಿಗಾಗಿ ಮಾಹಿತಿ ನೀಡಲು ಮತ್ತು ವಿದ್ಯಾರ್ಥಿ ವೇತನ ಹಾಗೂ ಇತರೆ ಸವಲತ್ತುಗಳ ಬಗ್ಗೆ ಅರಿವು ಮೂಡಿಸಲು ಒಂದು ವಿಭಾಗವನ್ನು ಸ್ಥಾಪಿಸಲು ಚರ್ಚಿಸಿ ನಿರ್ಣಯ ಕೈಗೊಳ್ಳುವುದು. |
| **ನಿರ್ಣಯ:** | ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ:ಸಾ.ಸ.6:29(2025) |
| ವಿಷಯ: | ಫಾದರ್ ಮುಲ್ಲರ್ ಕಾಲೇಜು, ಮಂಗಳೂರು ಇಲ್ಲಿನ M.Sc. Audiology and M.Sc. Speech Language Pathology ಸ್ನಾತಕೋತ್ತರ ವಿಭಾಗವನ್ನು ಪಿಹೆಚ್.ಡಿ. ವ್ಯಾಸಂಗಕ್ಕೆ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ನೀಡುವ ಬಗ್ಗೆ. |
| **ನಿರ್ಣಯ:** | ಪರಿಶೀಲನಾ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಿ ಪಿಹೆಚ್.ಡಿ. ವ್ಯಾಸಂಗಕ್ಕೆ ಅನುಮತಿ ನೀಡಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.6:30(2025) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರವನ್ನು ವಹಿಸಿದ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.6:31(2025)

ವಿಷಯ: ಡಾ.ವೇದವ ಪಿ ., ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗ , ಇವರ ವಿರುದ್ಧ ಬಂಟ್ವಾಳ ನಗರ ಪೋಲೀಸು ಠಾಣೆಯಲ್ಲಿ ದಾಖಲಾದ ಪ್ರಕರಣ - ಅಮಾನತು - ಮಾನ್ಯ ನ್ಯಾಯಾಲಯದ ಆದೇಶದ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.6:32(2025)

ವಿಷಯ: ಶ್ರೀ ಬಸವಣ್ಣ ಆರ್ ., ಕಿರಿಯ ಅಭಿಯಂತರರು (ವಿದ್ಯುತ್) ಇವರನ್ನು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್ ವಿಶ್ವವಿದ್ಯಾನಿಲಯಕ್ಕೆ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.6:33(2025)

ವಿಷಯ: ಎಂ.ಕಾಂ.(ಹೆಚ್.ಆರ್.ಡಿ.) ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:34(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಐದು ವರ್ಷದ NAAC ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:35(2025)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ಜುಲೈ 2025ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** ವರದಿಯನ್ನು ಪರಿಗಣಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.6:36(2025)

ವಿಷಯ: ಕೆನರಾ ಕಾಲೇಜು , ಮಹಾತ್ಮ ಗಾಂಧಿ ರೋಡ್ , ಕೊಡಿಯಾಲ್‌ಬೈಲ್, ಮಂಗಳೂರು ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.6:37(2025)

ವಿಷಯ: ಎ.ಜೆ. ಇನ್ಸ್ಟಿಟ್ಯೂಟ್ ಆಫ್ ಮೆನೇಜ್‌ಮೆಂಟ್, ಮಂಗಳೂರು ಎಂಬ ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಸಂಬಂಧ ಸ್ಥಾಯಿ ಸಮಿತಿ ರಚಿಸುವ ಬಗ್ಗೆ.

**ನಿರ್ಣಯ:** ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಘುರಾಜ್ ಇವರನ್ನು ಸಿಂಡಿಕೇಟು ನಾಮನಿರ್ದೇಶನ ಮಾಡಿದೆ. ಉಳಿದ ಸದಸ್ಯರನ್ನು ನಿಯಮಾನುಸಾರ ನಾಮನಿರ್ದೇಶನ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.6:38(2025)

ವಿಷಯ: ಶ್ರೀ ಯೂನಸ್ ಖಾನ್, ಅನುಚರ, ವಿಶ್ವವಿದ್ಯಾನಿಲಯ ಗ್ರಂಥಾಲಯ , ಮಂಗಳೂರು ವಿಶ್ವವಿದ್ಯಾನಿಲಯ ಇವರ ವೈದ್ಯಕೀಯ ವೆಚ್ಚದ ಪಾವತಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.6:39(2025)

ವಿಷಯ: ಅಧ್ಯಯನ ಮಂಡಳಿಗಳ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.6:40(2025)

ವಿಷಯ: ಡಾ.ಎಸ್.ಬಿ.ಎಂ. ಪ್ರಸನ್ನ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ-1 : ಆರ್ಥಿಕ ವರ್ಷ 2021-2022, 2022-2023, 2023-2024 ಮತ್ತು 2024-2025ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಆಗಿರುವ ಆಡಿಟ್ ಆಕ್ಷೇಪಣೆ ಮತ್ತು ವಸೂಲಾತಿಗೆ ತೆಗೆದುಕೊಂಡಿರುವ ಕ್ರಮಗಳನ್ನು ಸಭೆಗೆ ಮಂಡಿಸುವುದು ಹಾಗೂ ಚರ್ಚಿಸುವುದು.

**ನಿರ್ಣಯ:** ಚರ್ಚಿಸಲಾಯಿತು.

ವಿಷಯ-2 : ಯೂನಿವರ್ಸಿಟಿ ಗ್ರ್ಯಾಂಟ್ ಕಮಿಷನ್ (ಯು.ಜಿ.ಸಿ. ನವದೆಹಲಿ)ರವರು ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ SAP ಮತ್ತು SU ಜಂಟಿ ಯೋಜನೆಯಡಿಯಲ್ಲಿ ನೀಡಿರುವ ಅನುದಾನ ಎಷ್ಟು ಹಾಗೂ ನಮ್ಮ ಎಷ್ಟು ವಿಭಾಗಗಳಿಂದ Utilisation Certificate ನ್ನು ಹಾಜರುಪಡಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ಇದಕ್ಕೆ ಸಂಬಂಧಪಟ್ಟ ಇಲಾಖೆಗಳಿಂದ ಮಾಹಿತಿಯನ್ನು ತರಿಸಿ ಸಭೆಯಲ್ಲಿ ಚರ್ಚಿಸುವುದು.

**ನಿರ್ಣಯ:** ಚರ್ಚಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಹಣಕಾಸು:ಸಾ.ಸ.6:41(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ - ಅನುಪಾಲನಾ ವರದಿಯ ಅನುಮೋದನೆ ಕುರಿತು.

**ನಿರ್ಣಯ:** ಲೆಕ್ಕ ಪರಿಶೋಧನಾ ವರದಿಯ ಮೇಲೆ ತಯಾರಿಸಲಾದ ಅನುಪಾಲನಾ ವರದಿಯನ್ನು ಸಭೆಯಲ್ಲಿ ಮಂಡಿಸದಿರುವ ಕಾರಣ ಡಾ .ಎಸ್.ಬಿ.ಎಂ. ಪ್ರಸನ್ನ, ಡಾ.ಕೆ.ಸಿ.ಮಹದೇಶ, ಶ್ರೀ ಸುರೇಶ್ ಬಿ.ನಾವೂರು, ಶ್ರೀಮತಿ ಜೂಡಿತ್ ಮೆಂಡೋನ್ಸ, ಶ್ರೀ ರಘುರಾಜ್ , ಶ್ರೀ ಅಚ್ಚುತ ಗಟ್ಟಿ ಇವರುಗಳು ಅನುಮೋದಿಸಿರುವುದಿಲ್ಲ. ಆದರೂ ದಿನಾಂಕ 01.09.2025ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದಿಸಿರುವುದರಿಂದ ಹಾಗೂ ಕಾಗದ ಪತ್ರ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಿರುವುದ ರಿಂದ ಸರ್ಕಾರಕ್ಕೆ ಕಳುಹಿಸಿಕೊಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.6:42(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ / ಘಟಕ / ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.6:43(2025)

ವಿಷಯ: ಯುಜಿಸಿ ನಿಯಮಾವಳಿ 2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗದ ಬೋಧಕರಿಗೆ ವೃತ್ತಿ ಪದೋನ್ನತಿ - ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

"

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:44(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆರೋಗ್ಯಕೇಂದ್ರಕ್ಕೆ ಅಗತ್ಯವಿರುವ ರಾಸಾಯನಿಕಗಳು/ಗ್ಲಾಸ್‌ವೇರ್ /ಬಳಕೆ ವಸ್ತುಗಳ ಖರೀದಿಯ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:45(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಎಂ .ಎಸ್ಸಿ. ಬಯೋಟೆಕ್ನಾಲಜಿ ಕಾರ್ಯಕ್ರಮ ಜೀವ ವಿಜ್ಞಾನ ವಿಭಾಗ ಇಲ್ಲಿನ Water HPLC System ನ ಬಿಡಿಭಾಗಗಳ ಖರೀದಿ ಹಾಗೂ ವಾರ್ಷಿಕ ನಿರ್ವಹಣೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:46(2025)

ವಿಷಯ: NMR ಕೇಂದ್ರದ ಪ್ರಯೋಗಾಲಯಕ್ಕೆ ಒಂದು ವರ್ಷಕ್ಕೆ ಅಗತ್ಯವಿರುವ Liquid helium ಖರೀದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:47(2025)

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು , ಮಂಗಳೂರು ಇಲ್ಲಿಗೆ ರೂಸಾ 2.0 ಅನುದಾನದಿಂದ - Audio Visual ಉಪಕರಣ ಖರೀದಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.6:48(2025)

ವಿಷಯ: 2024-25ನೇ ಸಾಲಿನ ಸರಕಾರದ ಅಭಿವೃದ್ಧಿ ಅನುದಾನದಡಿ ಮಂಗಳೂರು ವಿಶ್ವವಿದ್ಯಾನಿಲಯದ ನಾಲ್ಕು ವಿಭಾಗಗಳಿಗೆ ಅಗತ್ಯವಿರುವ ITC Portable Podium, Collar Mike ಮತ್ತು Extention Box ಖರೀದಿಯ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ:ಸಾ.ಸ.6:49(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯಕ್ಕೆ ಅಗತ್ಯವಿರುವ Plagiarism Softwaresನ್ನು ಪಿಎಂ-ಉಷಾ ಯೋಜನೆಯ ಅನುದಾನದಿಂದ ಖರೀದಿಸುವ ಬಗ್ಗೆ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ.

**ನಿರ್ಣಯ:** ಅನುಮೋದಿಸಲಾಯಿತು.

"

ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ:ಸಾ.ಸ.6:50(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಜೀವವಿಜ್ಞಾನ ವಿ ಭಾಗಕ್ಕೆ ಅಗತ್ಯವಿರುವ Magnus Inclined Binocular Microscopes ಉಪಕರಣವನ್ನು ಪಿಎಂ -ಉಷಾ ಯೋಜನೆಯ ಅನುದಾನದಿಂದ ಖರೀದಿಸುವ ಬಗ್ಗೆ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ.

**ನಿರ್ಣಯ:** ಅನುಮೋದಿಸಲಾಯಿತು. ತಜ್ಞರಿಂದ ಗುಣಮಟ್ಟದ ಬಗ್ಗೆ ಪರಿಶೀಲನೆ ಮಾಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು :ಸಾ.ಸ.6:51(2025)

ವಿಷಯ: ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ :ಸಾ.ಸ.6:52(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ಶುಚಿತ್ವ ಹಾಗೂ ಗಾರ್ಡನ್ ವ್ಯವಸ್ಥೆಗೆ ಸಿಬ್ಬಂದಿಗಳನ್ನು ಪಡೆದುಕೊಳ್ಳುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು. ಸಿಬ್ಬಂದಿಗಳ ಮಾಹಿತಿಯನ್ನು ಡಾ.ಕೆ.ಸಿ.ಮಹದೇಶ ಇವರಿಗೆ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.6:53(2025)

ವಿಷಯ: 2025-26ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ (PG) ಕಾರ್ಯಕ್ರಮಗಳಿಗೆ ಅಗತ್ಯವಿರುವ ಅತಿಥಿ ಉಪನ್ಯಾಸಕರ ನೇಮಕಾತಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಆಯ್ಕೆಯಾದ ಅತಿಥಿ ಉಪನ್ಯಾಸಕರ ಪಟ್ಟಿಯನ್ನು ಮಾನ್ಯ ಸಿಂಡಿಕೇಟು ಸದಸ್ಯರುಗಳಿಗೆ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.6:54(2025)

ವಿಷಯ: ಸರಕಾರದ ಆದೇಶ ಹಾಗೂ ಲೆಕ್ಕ ಪರಿಶೋಧನಾ ಆಕ್ಷೇಪಣೆಗಳನ್ವಯ ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಗಳನ್ನು 1980 ರಿಂದ ಪರಿಷ್ಕರಿಸಿ , ದಿನಾಂಕ 01.01.2025ರಲ್ಲಿದ್ದಂತೆ ಪ್ರಕಟಿಸಲಾದ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಹಾಗೂ ಸದರಿ ಜೇಷ್ಠತಾ ಪಟ್ಟಿಗಳ ಆಧಾರದಲ್ಲಿ ಭಡ್ತಿಗಾಗಿ ಮೀಸಲಿರಿ ಸಿದ ಹುದ್ದೆಗಳಿಗೆ ಭಡ್ತಿ ನೀಡುವ ಪ್ರಸ್ತಾವನೆಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಟೇಬಲ್ ಆಜೆಂಡಾ ಇಟ್ಟ ಕಾರಣ ಹಾಗೂ ಸರ್ಕಾರದಿಂದ ಭಡ್ತಿಗೆ ಸಂಬಂಧಿಸಿದಂತೆ ಒಳಮೀಸಲಾತಿಯ ಹೊಸ ಆದೇಶ ಬರಲಿರುವ ಕಾರಣ ಮಾನ್ಯ ಸದಸ್ಯರುಗಳಾದ ಡಾ.ಎಸ್.ಬಿ.ಎಂ. ಪ್ರಸನ್ನ, ಡಾ.ಕೆ.ಸಿ.ಮಹದೇಶ, ಶ್ರೀ ಸುರೇಶ್ ಬಿ.ನಾವೂರು, ಶ್ರೀಮತಿ ಜೂಡಿತ್ ಮೆಂಡೋನ್ಸ, ಶ್ರೀ ರಘುರಾಜ್, ಶ್ರೀ ಅಚ್ಚುತ ಗಟ್ಟಿ ಇವರು ಕಾರ್ಯಸೂಚಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸುವಂತೆ ತಿಳಿಸಿರುತ್ತಾರೆ.

ಸಿಂಡಿಕೇಟಿನ ಅಧ್ಯಕ್ಷರಾದ ಮಾನ್ಯ ಕುಲಪತಿಯವರು ಕಾರ್ಯಸೂಚಿಯನ್ನು ಅನುಮೋದಿಸಿದರು. ಜೊತೆಗೆ ಸಭೆಯಲ್ಲಿ ಉಪಸ್ಥಿತರಿದ್ದ ಡೀನರಾದ ಪ್ರೊ. ಪರಿಣಿತ, ಕುಲಸಚಿವರು (ಪರೀಕ್ಷಾಂಗ) ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಆಯುಕ್ತರ ಪರವಾಗಿ ಸಭೆಗೆ ಹಾಜರಾಗಿದ್ದ ಪ್ರಾಂಶುಪಾಲರು ಮತ್ತು ಸಹ ನಿರ್ದೇಶಕರು , ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ , ಮಂಗಳೂರು ಇವರು ಕೂಡಾ ಸಹಮತ ವ್ಯಕ್ತಪಡಿಸಿದರು. ಒಟ್ಟಿನಲ್ಲಿ ಅನುಮೋದಿಸಿ ನಿರ್ಣಯಿಸಲಾಯಿತು.

**ಇತರೆ ವಿಷಯಗಳು:**

1) ಮಾನ್ಯ ಸಿಂಡಿಕೇಟು ಸದಸ್ಯರುಗಳ ನಿಯೋಗವನ್ನು ಕಳೆದ ಎರಡು ವರ್ಷಗಳಲ್ಲಿ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪಡೆದ ಮಹನೀಯರ ಬಳಿ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಪೂರಕವಾಗುವ ಪ್ರಸ್ತಾವನೆಗಳೊಂದಿಗೆ ಕರೆದೊಯ್ದು ವಿವಿಧ ಯೋಜನೆಗಳಿಗೆ ಆರ್ಥಿಕ ಸಹಕಾರವನ್ನು ಕೋರಲು ನಿರ್ಣಯಿಸಲಾಯಿತು.

2) ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯಭಾರ ಹೆಚ್ಚಿರುವುದರಿಂದ ಪೂರ್ಣಕಾಲಿಕ ಹಣಕಾಸು ಅಧಿಕಾರಿಯವರ ಅಗತ್ಯವಿರುತ್ತದೆ. ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹಣಕಾಸು ಅಧಿಕಾರಿಯವರು ವಿಶ್ವವಿದ್ಯಾನಿಲಯದಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ವಿಶ್ವವಿದ್ಯಾನಿಲಯಕ್ಕೆ ಪೂರ್ಣಕಾಲಿಕ ಹಣಕಾಸು ಅಧಿಕಾರಿಯವರನ್ನು ನಿಯೋಜಿಸುವಂತೆ ಕೋರಿ ಸರ್ಕಾರಕ್ಕೆ ಪತ್ರ ಬರೆಯಲು ನಿರ್ಣಯಿಸಲಾಯಿತು.

3) ಸಿಂಡಿಕೇಟು ಸದಸ್ಯರ ಕೊಠಡಿಯನ್ನು ಅನುದಾನದ ಲಭ್ಯತೆಯ ಮೇರೆಗೆ ನವೀಕರಣಗೊಳಿಸಲು ನಿರ್ಣಯಿಸಲಾಯಿತು.

4) ಹಣಕಾಸು ಸಮಿತಿ ಸಭೆಯ ಕಾರ್ಯಸೂಚಿಗಳನ್ನು ಸಭೆಗೆ ಸಾಕಷ್ಟು ಮುಂಚಿತವಾಗಿ ಸದಸ್ಯರುಗಳಿಗೆ ಕಳುಹಿಸಿಕೊಡಲು ನಿರ್ಣಯಿಸಲಾಯಿತು.

5) ವಿವಿಧ ಪೀಠಗಳಿಗೆ ಸದಸ್ಯರನ್ನು ಡಿಸೆಂಬರ್ ತಿಂಗಳಲ್ಲಿ ನೇಮಕಗೊಳಿಸಲಾಗುವುದು ಹಾಗೂ ಪೀಠಗಳ ನಿರ್ದೇಶಕರ ಹುದ್ದೆಗೆ ನೇಮಕಾತಿ ಮಾಡಲು ಸಹಾಯಕ ಪ್ರಾಧ್ಯಾಪಕರು ಹಾಗೂ ಸಹ ಪ್ರಾಧ್ಯಾಪಕರುಗಳನ್ನು ಪರಿಗಣಿಸುವ ನಿಟ್ಟಿನಲ್ಲಿ ಪರಿನಿಯಮಗಳಿಗೆ ಅಗತ್ಯ ತಿದ್ದುಪಡಿ ಮಾಡಲು ನಿರ್ಣಯಿಸಲಾಯಿತು.

6) ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಯವರು ಸಿಂಡಿಕೇಟು ಸಭೆಯು ಮಧ್ಯಾಹ್ನ ಊಟದ ನಂತರ 3.00 ಗಂಟೆಗೆ ಮುಂದುವರೆಯುವುದೆಂದು ತಿಳಿಸಿ ಸಭೆಗೆ ವಿರಾಮವನ್ನು ನೀಡಿದರು. ಸಮಯ 3.30 ಆದರೂ ಮಾನ್ಯ ಸಿಂಡಿಕೇಟು ಸದಸ್ಯರುಗಳಾದ ಡಾ.ಎಸ್.ಬಿ.ಎಂ. ಪ್ರಸನ್ನ, ಡಾ.ಕೆ.ಸಿ.ಮಹದೇಶ, ಶ್ರೀ ಸುರೇಶ್ ಬಿ.ನಾವೂರು, ಶ್ರೀಮತಿ ಜೂಡಿತ್ ಮೆಂಡೋನ್ಸ, ಶ್ರೀ ರಘುರಾಜ್, ಶ್ರೀ ಅಚ್ಚುತ ಗಟ್ಟಿ ಇವರು ಸಭೆಗೆ ಹಾಜರಾಗಲಿಲ್ಲ. ಸಭೆಗೆ ಹಾಜರಾಗುವಂತೆ ಪುನರ್ ಮನವಿ ಮಾಡಿದರೂ ಕೂಡಾ ಸಭೆಗೆ ಹಾಜರಾಗದ ಕಾರಣ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರ ಸಮ್ಮುಖದಲ್ಲಿ ಕಾರ್ಯಸೂಚಿ 29 ರಿಂದ 35 ರವರೆಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು. ತದನಂತರ ಮೇಲೆ ಹೆಸರಿಸಿದ ಮಾನ್ಯ ಸಿಂಡಿಕೇಟು ಸದಸ್ಯರು ಅಪರಾಹ್ನ 3.45ಕ್ಕೆ ಪುನ: ಸಭೆಯಲ್ಲಿ ಭಾಗವಹಿಸಿದ ನಂತರ ಉಳಿದ ಕಾರ್ಯಸೂಚಿಗಳನ್ನು ಕೈಗೆತ್ತಿಕೊಳ್ಳಲಾಯಿತು.

7) ಪೀಠಗಳ ಕಾರ್ಯಕ್ರಮಗಳನ್ನು ಆದಷ್ಟು ಆಫ್ ಲೈನ್ ನಲ್ಲೆ ನಡೆಸುವಂತೆ ನಿರ್ಣಯಿಸಲಾಯಿತು.

೮) ವಿಶ್ವವಿದ್ಯಾನಿಲಯ ಕಾಲೇಜಿನ ಪ್ರಾಂಶುಪಾಲರು ಪ್ರಭಾರದಲ್ಲಿರುವ ಕಾರಣ ಎಲ್ಲಾ ಕಡೆಗಳಲ್ಲಿ ಪ್ರಭಾರ ಪ್ರಾಂಶುಪಾಲರು ಎಂದು ನಮೂದಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು.

೯) ವಿಶ್ವವಿದ್ಯಾನಿಲಯದ ವಿವಿಧ ಕಾರ್ಯಕ್ರಮಗಳನ್ನು ನಿರೂಪಿಸುವಾಗ ಯಾವುದೇ ತಪ್ಪುಗಳಾಗದಂತೆ ಎಚ್ಚರವಹಿಸುವಂತೆ ಕಾರ್ಯಕ್ರಮ ಆಯೋಜಕರುಗಳಿಗೆ ಸೂಚಿಸಲು ನಿರ್ಣಯಿಸಲಾಯಿತು.

**ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.**

| | |
|---|---|
| ಸಹಿ/- | ಸಹಿ/- |
| **ಕುಲಸಚಿವರು** | **ಕುಲಪತಿಯವರು** |